ದಿನಾಂಕ 15.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. SPK ವಕೀಲರಿಂದ:**

ಪ್ರತಿವಾದಿ ನಿಮ್ಮ ಅಳಿಯ ಎಂದರೆ ಸರಿ . ನಿಮ್ಮ ಮಗಳು ಹಾಗೂ ಪ್ರತಿವಾದಿಯ ಮದುವೆ ಯಾವಾಗ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿದಾರರು 08.05.2008 ರಂದು ಆಗಿರುವುದಾಗಿ ನುಡಿಯುತ್ತಾರೆ. ಬೆಂಗಳೂರಿನ ITI Layout ನ VRM ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯ ನಂತರ ನಿಮ್ಮ ಅಳಿಯ ಮತ್ತು ಮಗಳು ದೊಡ್ಡಮರಳವಾಡಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ . ನಂತರ ವ್ಯಾಪರಕ್ಕಾಗಿ 2012ರಲ್ಲಿ ಕೆಂಗೇರಿಯಲ್ಲಿ ಸೇರಿಕೊಂಡಿರುತ್ತಾರೆ ಎಂದರೆ ಸರಿ . ನಿಮ್ಮ ಮಗಳು ಮರಣ ಹೊಂದುವವರೆಗೂ ನಿಮ್ಮ ಮೊಮ್ಮಕ್ಕಳು ಪ್ರತಿವಾದಿ ಮತ್ತು ನಿಮ್ಮ ಮಗಳ ಹತ್ತಿರವೇ ಇದ್ದರೂ ಎಂದರೆ ಸಾಕ್ಷಿದಾರರು ಒಬ್ಬ ಮೊಮ್ಮಗ ಅವರ ಹತ್ತಿರ ಇದ್ದ , ಇನ್ನೊಬ್ಬ / ವಾದಿ 2 ಹುಟ್ಟಿದಾಗಿನಿಂದ ನನ್ನ ಬಳಿ ಇದ್ದ ಎಂದು ನುಡಿಯುತ್ತಾರೆ. ನಿಮ್ಮ ಮಗಳು ದೊಡ್ಡಮರಳವಾಡಿಯಲ್ಲಿ ಇದ್ದ ಹಾಗೆಯೇ ದಾವಾ ಸ್ವತ್ತು ಕ್ರಯ ಆಗಿರುತ್ತದೆ ಎಂದರೆ ಸರಿ . ನಿಮ್ಮ ಅಳಿಯ ಮತ್ತು ಮಗಳು ದಾವಾ ಸ್ವತ್ತನ್ನು ಯಾರಿಂದ ಕೊಂಡು ಕೊಂಡಿರುತ್ತಾರೆ ಎಂದರೆ ಚೆಲುವೇಗೌಡ , ಜಯಮ್ಮ , ಶಾಂತ ಕುಮಾರ್ ರವರಿಂದ ಕೊಂಡು ಕೊಂಡಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತನ್ನು ಪ್ರತಿವಾದಿಯೇ ತನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನಲ್ಲಿ ನಿಮ್ಮ ಮಗಳಿಗೆ ಹಕ್ಕಿಲ್ಲ , ಪ್ರತಿವಾದಿಯೇ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಮಗಳು ಟ್ಯೂಷನ್ ನಡೆಸುತ್ತಿದ್ದ

ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ಬಿ. ಕಾಂ. ವಿದ್ಯಾಭ್ಯಾಸ ಮಾಡಿರುತ್ತಾರೆ, ಆ ಸಂಬಂಂಧ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ . ನಿಮ್ಮ ಮಗಳು ಟೈಲರಿಂಗ್ ವೃತ್ತಿ ಮಾಡುತ್ತಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮದುವೆಯ ನಂತರ ನಿಮ್ಮ ಮಗಳು ಮತ್ತು ಪ್ರತಿವಾದಿ ಅನ್ಯೂನ್ಯವಾಗಿದ್ದರಾ ಎಂದರೆ ಸರಿಯಲ್ಲ. 2022 ರಲ್ಲಿ ನಿಮ್ಮ ಮಗಳು ಯಾವ ಕಾರಣಕ್ಕಾಗಿ ತೀರಿಕೊಂಡರು ಎಂದರೆ ಸಾಕ್ಷಿದಾರರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ